# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ: | 146 |
| ಉತ್ತರಿಸಬೇಕಾದ ದಿನಾಂಕ: | 05.03.2025 |
| ಸದಸ್ಯರ ಹೆಸರು: | ಶ್ರೀ ಚಿದಾನಂದ್ ಎಂ.ಗೌಡ(ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು: | ಮಾನ್ಯ ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ತುಮಕೂರು ಜಿಲ್ಲೆಯಲ್ಲಿ ಇ-ಕೆವೈಸಿ ಮಾಡಲಾದ ಜಮೀನುಗಳ ಸಂಖ್ಯೆ ಎಷ್ಟು; ಬಾಕಿಯಿರುವ ಜಮೀನುಗಳ ಸಂಖ್ಯೆ ಎಷ್ಟು; ಬಾಕಿಯಿರುವ ಜಮೀನುಗಳ ಇ-ಕೆವೈಸಿ ಯನ್ನು ಮಾಡಲು ಕೈಗೊಂಡಿರುವ ಕ್ರಮ ಗಳೇನು: (ತಾಲ್ಲೂಕುವಾರು ವಿವರ ನೀಡುವುದು: | ತುಮಕೂರು ಜಿಲ್ಲೆಯಲ್ಲಿ ಆಧಾರ್ ಸೀಡಿಂಗ್ ಮಾಡಬೇಕಾದ 2697386 ಜಮೀನುಗಳ ಪೈಕಿ 1561220 ಜಮೀನುಗಳಿಗೆ ಇ-ಕೆವೈಸಿ ಮಾಡಲಾಗಿದ್ದು, ಗ್ರಾಮಲೆಕ್ಕಾಧಿಕಾರಿಗಳು ಪರಿಶೀಲನೆ ವೇಳೆ 5642 ಜಮೀನುಗಳನ್ನು ಸರ್ಕಾರಿ, 6149 ಜಮೀನುಗಳನ್ನು ಭೂಸ್ವಾಧೀನ, 205231 ಜಮೀನುಗಳನ್ನು ಭೂಪರಿವರ್ತಿತ ಹಾಗೂ 559586 ಜಮೀನುಗಳ ಮಾಲೀಕರು ಮೌತಿಯಾಗಿರುವುದಾಗಿ ಗುರುತು ಮಾಡಲಾಗಿದ್ದು, ಇನ್ನುಳಿದ 359558 ಜಮೀನುಗಳು ಇ-ಕೆವೈಸಿ ಮಾಡಲು ಬಾಕಿಯಿರುತ್ತವೆ.<br>ತಾಲ್ಲೂಕುವಾರು ವಿವರವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಇ-ಕೆವೈಸಿ ಮಾಡಲು ಜಮೀನು ಮಾಲೀಕರಿಂದ ಪಡೆಯಲಾಗುವ ದಾಖಲೆಗಳು ಯಾವುವು; | ಜಮೀನುಗಳಿಗೆ ಆದಾರ್ ಸಂಖ್ಯೆ ಜೋಡಣೆ ಮಾಡುವ ಸಲುವಾಗಿ ಆದಾರ್ ಸೀಡಿಂಗ್ ಆಪ್ ಅಭಿವೃಧ್ಧಿಪಡಿಸಿದ್ದು, ರಾಜ್ಯದ ಎಲ್ಲಾ ಗ್ರಾಮಲೆಕ್ಕಾಧಿಕಾರಿಗಳು ಸದರಿ App ಮುಖೇನ ಕ್ಷೇತ್ರ ಪರಿಶೀಲನೆ ಮಾಡಿ ಜಮೀನು ಮಾಲೀಕರ ಆಧಾರ್ ಸಂಖ್ಯೆಯನ್ನು ಜಮೀನಿನೊಂದಿಗೆ ಜೋಡಣೆ ಮಾಡಲು ಒಪ್ಪಿಗೆ (Consent) ಪಡೆಯಲಾಗುತ್ತಿದೆ. |
| (ಇ) | ಎಲ್ಲಾ ಜಮೀನುಗಳನ್ನು ಇ-ಕೆವೈಸಿ ವ್ಯಾಪ್ತಿಗೆ ತರಲು ಸರ್ಕಾರ ಕೈಗೊಂಡ ಕ್ರಮಗಳೇನು; | ರಾಜ್ಯದೆಲ್ಲಡೆ ಆಧಾರ್ ಸೀಡಿಂಗ್ ಪ್ರಕ್ರಿಯೆಯನ್ನು ವಿಶೇಷ ಅಭಿಯಾನ ಮಾದರಿಯಲ್ಲಿ ಕೈಗೊಳ್ಳಲಾಗಿದ್ದು, ಜಮೀನುಗಳಿಗೆ ಆದಾರ್ ಸಂಖ್ಯೆ ಜೋಡಣೆ ಮಾಡುವ ಸಲುವಾಗಿ ಆದಾರ್ ಸೀಡಿಂಗ್ ಆಪ್ ಅಭಿವೃಧ್ಧಿಪಡಿಸಿದ್ದು, ರಾಜ್ಯದ ಎಲ್ಲಾ ಗ್ರಾಮಲೆಕ್ಕಾಧಿಕಾರಿಗಳು ಸದರಿ ಮುಖೇನ ಗ್ರಾಮಗಳಿಗೆ ಭೇಟಿ ನೀಡಿ, ಕ್ಷೇತ್ರ ಪರಿಶೀಲನೆ ಮಾಡಿ ಜಮೀನು ಮಾಲೀಕರ ಆಧಾರ್ ಸಂಖ್ಯೆಯನ್ನು ಜಮೀನಿನೊಂದಿಗೆ ಜೋಡಣೆ ಮಾಡಲಾಗುತ್ತಿದ್ದು, ಶೀಘ್ರದಲ್ಲಿಯೇ ಎಲ್ಲಾ ಜಮೀನುಗಳನ್ನು ಇ-ಕೆವೈಸಿ ವ್ಯಾಪ್ತಿಗೆ ತರಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| (ಈ) | ಸಾರ್ವಜನಿಕರು ಸ್ವತ: ತಮ್ಮ ಜಮೀನು ಇ-ಕೆವೈಸಿ ಮಾಡಲು ಅವಕಾಶ ಕಲ್ಪಿಸಲಾಗಿದೆಯೇ: ಕಲ್ಪಿಸಲಾಗದಿದ್ದರೆ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮ ಗಳೇನು; | ಸಾರ್ವಜನಿಕರು/ರೈತರು ಸ್ವತಃ ತಮ್ಮ ಜಮೀನು ಇ-ಕೆವೈಸಿ ಮಾಡಲು ಪ್ರಸ್ತುತ ಅವಕಾಶವಿರುವುದಿಲ್ಲ, |
| ಉ) | ಇ-ಕೆವೈಸಿಯನ್ನು ಮಾಡುವ ನೌಕರ/ಅಧಿಕಾರಿಗಳಿಗೆ ಪ್ರತಿ ಜಮೀನಿಗೆ ನೀಡಬೇಕಾದ ಭತ್ಯೆ ಎಷ್ಟು; ಇಲ್ಲಿಯವರೆಗೆ ಎಷ್ಟು ಭತ್ಯೆ ಬಿಡುಗಡೆ ಮಾಡಲಾಗಿದೆ; ಬಾಕಿಯಿರುವ ಭತ್ಯೆ ಎಷ್ಟು; ಬಾಕಿಯಿರುವ ಭತ್ಯೆಯನ್ನು ಯಾವ ಕಾಲಮಿತಿಯಲ್ಲಿ ಬಿಡುಗಡೆ ಮಾಡಲಾಗುವುದು? | State Level Review and Monitoring Committee DILRMP ಯೋಜನೆಯ ಸಭೆಯಲ್ಲಿ ಪ್ರತಿ ಆಧಾರ್ ಜೋಡಣೆಗೆ ಗ್ರಾಮ ಆಡಳಿತಾಧಿಕಾರಿಗೆ ರೂ.1 ಹಾಗೂ ಗ್ರಾಮ ಸಹಾಯಕರಿಗೆ ರೂ.1 ರಂತೆ ಅನುದಾನವನ್ನು ಬಿಡುಗಡೆ ಮಾಡುವಂತೆ ನಿರ್ಧರಿಸಲಾಗಿದ್ದು, ಅದರಂತೆ, ತುಮಕೂರು ಜಿಲ್ಲೆಯಲ್ಲಿ ಒಟ್ಟು 26,97,386 ಪಹಣಿದಾರರಿದ್ದು, ಈ ಪೈಕಿ 31-01-2025 ರ ಅಂತ್ಯಕ್ಕೆ ಒಟ್ಟು 1481462 ಪಹಣಿಗಳಿಗೆ ಆಧಾರ್ ಜೋಡಣೆ ಮಾಡಲಾಗಿದ್ದು,<br>ಅದರಂತೆ, ತುಮಕೂರು ಜಿಲ್ಲೆಗೆ ಒಟ್ಟು ರೂ.29,62,924/-ಗಳನ್ನು ಬಿಡುಗಡೆ ಮಾಡ ಲಾಗಿರುತ್ತದೆ . |

ಸಂಖ್ಯೆ.ಕಂಇ 68 ಎಂಆರ್‌ಆರ್ 2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು